**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/05/ಸಿಡಿಸಿ(1)/2024(1314612)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು
ದಿನಾಂಕ:25-02-2025.

**ಸುತ್ತೋಲೆ**

ವಿಷಯ: C-25 ಕರಡು ಡಿಪ್ಲೊಮಾ ಪಠ್ಯಕ್ರಮಗಳ ಕುರಿತು ವಸ್ತುನಿಷ್ಟ ಅಭಿಪ್ರಾಯಗಳನ್ನು ಸಂಗ್ರಹಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025-26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ವ್ಯಾಸಂಗದಲ್ಲಿ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದ್ದು, ಸದರಿ ವಿಷಯವಾಗಿ ವಿಷಯ ತಜ್ಞರು, NITTTR ಸಂಸ್ಥೆ ಹಾಗೂ ವಿವಿಧ ಔದ್ಯೋಗಿಕ ಕ್ಷೇತ್ರಗಳ ಪರಿಣಿತರ ಸಹಯೋಗದಿಂದ ಪ್ರೋಗ್ರಾಂವಾರು 1 ರಿಂದ 6ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗದ ಕರಡು ಪಠ್ಯಕ್ರಮಗಳನ್ನು ಸಿದ್ದಪಡಿಸಿ ಇಲಾಖೆಯ ಅಂತರಜಾಲ (https://dtek.karnataka.gov.in)ದ ಡಿಪ್ಲೊಮಾ ಪಠ್ಯಕ್ರಮ ವಿಭಾಗದಲ್ಲಿ ಪ್ರಕಟಿಸಲಾಗಿದೆ. ಸಂಬಂಧಪಟ್ಟ ಪ್ರೋಗ್ರಾಂಗಳ ವಿಷಯ ಪರಿಣಿತರಿಂದ, ಉಪನ್ಯಾಸಕರಿಂದ ಮತ್ತು ಹಳೆ ವಿದ್ಯಾರ್ಥಿಗಳಿಂದ ಇಲಾಖೆಯ ಅಂತರಜಾಲದಲ್ಲಿ ಪ್ರಕಟಿಸಿರುವ ಕರಡು ಪಠ್ಯಕ್ರಮಗಳ ಬಗ್ಗೆ ವಸ್ತುನಿಷ್ಠ ಅಭಿಪ್ರಾಯಗಳನ್ನು ಕೋರಿದ್ದು, ಈ ಕೆಳಕಂಡ ಗೂಗಲ್ ಲಿಂಕ್ ಮುಖಾಂತರ ಅಭಿಪ್ರಾಯಗಳನ್ನು ದಿನಾಂಕ:**20/03/2025**ರ ಒಳಗೆ ಸಲ್ಲಿಸಲು ಕೋರಿದೆ.

https://forms.gle/cenYqr2mSGrQVxfg6

Digitally signed by
MANJUSHREE N
Date: 27-02-2025
10:29:51
**ಆಯುಕ್ತರು**

ಇವರಿಗೆ:

ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ: ಸಂಸ್ಥೆಯಲ್ಲಿನ ಎಲ್ಲ ಉಪನ್ಯಾಸಕರುಗಳ ಗಮನಕ್ಕೆ ತರಲು ಮತ್ತು ಅಭಿಪ್ರಾಯಗಳನ್ನು ಸಲ್ಲಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲು.